# ಕೇಳೆ ಗೋಪಿ ಗೋಪಾಲ ಮಾಡಿದ ಬಲು

1. **Ref.:** Shri Purandara Dasara Sahitya Part – 4, Krishna Leele, edited by Shri Betageri Krishna Sharma and Shri Bengeri Huchhu Rayaru, page No. 60.
2. **Note:** This kruti is not available in any other standard reference book that I referred.

ರಾಗ: -----　　　　　　　ತಾಳ: -----

ಕೇಳೆ ಗೋಪಿ ಗೋಪಾಲ ಮಾಡಿದ ಬಲು
ದಾಳಿಯ ಗೋಕುಲದಿ　　|| ಪ ||

ತಾಳೆಲಾರೆವೆ ತವಕದಲಿ ಕಂದಗೆ ಬುದ್ಧಿ
ಹೇಳೆ ಕೃಷ್ಣನ ಕರೆದು　　|| ಅಪ ||

ಸರಿರಾತ್ರಿಯೊಳು ಸರಸರನೆ ಮನೆಗೆ ಬಂದು
ಸುರಿದು ಪಾಳ್ಬೆಣ್ಣೆಗಳ
ಉರೋಜಗಳಿಗೆ ಕರ ಸರಿಸಿ ಕಣ್ಣಳನು
ತೆರೆದು ನೋಡುವನೆ ನಮ್ಮ　　|| ೧ ||

ಗಂಡನು ಮನೆಯೊಳಗಿರಲು ಬಂದು ಕೃಷ್ಣ
ಭಂಡು ಮಾತುಗಳ ಬಹು
ತುಂಡತನದಲಾಡಿ ಉದ್ದಂಡ ಕಠಿಣ ಕಾಯ
ದುಂಡು ಕುಚವ ಪಿಡಿದ　　|| ೨ ||

.......... ವದ ಮೇಲಿರಲು ತಾ
ಸೀರೆಯ ಸೆಳೆವ ನೋಡೆ
ಆರಿವರೆಂದು ವಿಚಾರಿಸಿ ನೋಡಲು
ಮೋರೆಯ ಬಾಗಿದನೆ　　|| ೩ ||

ಕೇರಿಯೊಳಗೆ ದಧಿ ಮಾರುತಿರಲು ಕೃಷ್ಣ
ಸಾರಿ ಬಂದು ಮೊಸರ

ಸೂರೆಗೊಂಡು ಪರ ನಾರಿಯರ ನೆರೆದು ತಾ
ಘೋರ ರೂಪದಿ ಮೆರೆದ     ॥ ೪ ॥

ಆಡಲೇತಕೆ ನಮ್ಮ ಬಾಗಿಲಂಗಳದೊಳು
ಬೇಡುವ ಜಲ ದೈನ್ಯದಿ
ನೀಡುವೆ ಜಲ ಜಲಜಾಕ್ಷ ಬಾಬಾ ಎನೆ
ಮಾಡುವ ರತಿ ಎಂಬನೆ     ॥ ೫ ॥

ಹುಡುಗನೆಂದು ಕೈಯ ಪಿಡಿಯ ಪೋಗಲು ನಮ್ಮ
ಉಡೆ-ಮುಡಿ ಪಿಡಿದ ನೋಡೆ
ಪಡೆದವಳಿಗೆ ಪೇಳುವೆ ನಡೆ ಎನೆ ಮುಚ್ಚ
ಕೊಡಲಿ ತೋರುವನೆ ಗೋಪಿ     ॥ ೬ ॥

ಮಡದಿಯರೆಲ್ಲರು ಮೀಯುತಲಿರೆ ಮೈ
ಉಡುಗೆಯ ತೆಗೆದುಕೊಂಡು
ಸಡಗರದಲಿ ಬೇಡಿಕೊಳ್ಳೆ ವಸ್ತ್ರಗಳನು
ಕೊಡದೆ ಅಡವಿಗೆ ನಡೆದ     ॥ ೭ ॥

ಬೆಣ್ಣೆಯ ತಿಂದು ತಮ್ಮಣ್ಣಗೆ ತಾ ಕೊಟ್ಟು
ಚಿಣ್ಣರ ಬಡಿವ ನೋಡೆ
ಬಣ್ಣಿಸಿ ನಮ್ಮ ಬಾಯಿಗೆ ಬೆಣ್ಣೆ ತೊಡೆಯುತ
ಬೆಣ್ಣೆಯ ತಿಂದಿರೆಂಬ     ॥ ೮ ॥

ಏಣಲೋಚನೆ ಸರ್ಪವೇಣಿ ನಮ್ಮ ಮನೆ
ಓಣಿಯೊಳಗೆ ಪೋಗುತ
ಕಾಣದಂತೆ ಚಕ್ರಪಾಣಿ ನಮ್ಮೊಳು ತನ್ನ
ತ್ರಾಣವ ತೋರಿದನೆ     ॥ ೯ ॥

ಪದುಮನಾಭನು ಪುರದ ಚದುರಿಯರಿಗೆ ತಾನು
ಮದನ ಶಾಸ್ತ್ರವ ಪೇಳುತ
ಮುದದೊಳಗಿರಲವರೊಡೆಯ ಬರಲು ಕೃಷ್ಣ
ಕುದುರೆಯನೇರಿದನೆ     ॥ ೧೦ ॥

ಎಷ್ಟುಪದ್ರುವ ಕೊಟ್ಟರು ಗೋಕುಲದೊಳು
ಬಿಟ್ಟವನಿರಲಾರೆವೆ
ಸೃಷ್ಟಿಯೊಳಗೆ ಸರ್ವಾಭೀಷ್ಟದ ಪುರಂದರ
ವಿಠ್ಠಲ ಸಲಹುವನೆ ॥ ೧೧ ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಗೋಪಿಕಾ ಸ್ತ್ರೀಯರ ದೂರು.

**ಕಣ್ಗಳನು ತೆರೆದು ನೋಡುವನೆ** = ಮತ್ಸ್ಯಾವತಾರ

**ಉದ್ದಂಡ ಕಠಿಣ ಕಾಯ** = ಕೂರ್ಮಾವತಾರ

**ಮೋರೆಯ ಬಾಗಿದನೆ** = ವರಾಹಾವತಾರ

**ಘೋರ ರೂಪದಿ ಮೆರೆದ** = ನರಸಿಂಹಾವತಾರ

**ಬೇಡುವ ಜಲ ದೈನ್ಯದಿ** = ವಾಮನಾವತಾರ

**ಮುಚ್ಚ ಕೊಡಲಿ ತೋರುವನೆ** = ಪರಶುರಾಮಾವತಾರ

**ಅಡವಿಗೆ ನಡೆದ** = ರಾಮಾವತಾರ

**ಬೆಣ್ಣೆಯ ತಿಂದು …….. ತಿಂದಿರೆಂಬ** = ಕೃಷ್ಣಾವತಾರ

**ಏಣಲೋಚನೆ …….. ತ್ರಾಣವ ತೋರಿದನೆ** = ಕೃಷ್ಣಾವತಾರ

**ಮದನ ಶಾಸ್ತ್ರವ ಪೇಳುತ** = ಬೌದ್ಧಾವತಾರ

**ಕುದುರೆಯನೇರಿದನೆ** = ಕಲ್ಕ್ಯಾವತಾರ

**Classification:** Keerthane
**Ankita:** purandara vittala
**Location:** NA
**Category:** Krishna Leele, dashavatara
**Sub-Category:** Krishna, dashavatara, benne, gopi, Gopala, gokula, buddi, koosu, iruLu, halu, kannu, pati, mane, bagilu, deha, keri, hennu, ADu, niru, kai, patni, kaadu, bayi, shastra, kudure,

**Pravachana:** NA

**Explanation:** NA